## 16. ಬೆಂಗಳೂರು ಐಐಎಸ್‌ಸಿ

ಟೈಮ್ಸ್ ಉನ್ನತ ಶಿಕ್ಷಣದ ವಿಶ್ವವಿದ್ಯಾಲಯದ ರ್‍ಯಾಂಕಿಂಗ್ ಪಟ್ಟಿಯಲ್ಲಿ ಈ ಬಾರಿ ದೇಶದ 63 ವಿಶ್ವವಿದ್ಯಾಲಯಗಳು ಸೇರ್ಪಡೆಯಾಗಿವೆ. ಕಳೆದ ವರ್ಷ ಈ ಪಟ್ಟಿಯಲ್ಲಿ ಕೇವಲ 14 ವಿವಿಗಳು ಮಾತ್ರ ಇದ್ದಿದ್ದು ಈ ಬಾರಿ 63 ವಿವಿಗಳಿಗೇರಿರುವುದು ಇಲ್ಲಿ ಗಮನಾರ್ಹ. ಭಾರತದ ವಿವಿಗಳ ಪೈಕಿ ಎಂದಿನಂತೆ ಬೆಂಗಳೂರಿನ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆ (ಐಐಎಸ್‌ಸಿ) ಅಗ್ರಸ್ಥಾನವನ್ನು ಕಾಯ್ದುಕೊಂಡಿದೆ.

ಬೆಂಗಳೂರಿನ ಐಐಎಸ್‌ಸಿ ಸಂಸ್ಥೆಯು ಟೈಮ್ಸ್ ರ್‍ಯಾಂಕ್ ಪಟ್ಟಿಗೆ ಸೇರಲು 2015ರಲ್ಲಿ ಅರ್ಹತೆ ಪಡೆದಂದಿನಿಂದಲೂ ಭಾರತದ ವಿವಿಗಳ ಸಾಲಿನಲ್ಲಿ ಅದು ಅಗ್ರಸ್ಥಾನ ಕಾಯ್ದುಕೊಂಡು ಬರುತ್ತಿದೆ. ಬೆಂಗಳೂರಿನ ಐಐಎಸ್‌ಸಿ ಹೊರತಾಗಿ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಹಾಗೂ ಮೈಸೂರಿನ ವಿವಿ ಕೂಡಾ ಈ ರ್‍ಯಾಂಕ್ ಪಟ್ಟಿಗೆ ಸೇರಿದೆ. 1500 ವಿಶ್ವವಿದ್ಯಾಲಯಗಳ ಬೋಧನಾ ಗುಣಮಟ್ಟ ಅಂತರರಾಷ್ಟ್ರೀಯ ಅವಲೋಕನ, ಸಂಶೋಧನೆ ಹಾಗೂ ಜ್ಞಾನದ ವರ್ಗಾವಣೆ ಆಧರಿಸಿ ರ್‍ಯಾಂಕಿಂಗ್ ನೀಡಲಾಗುತ್ತಿದೆ. ಇಂಗ್ಲೆಂಡಿನ ಆಕ್ಸ್‌ಫರ್ಡ್ ಯುನಿವರ್ಸಿಟಿ ಈ ರ್‍ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನ ಹೊಂದಿದೆ. ಈ ಬಾರಿ ದೆಹಲಿಯ ಇಂದ್ರಪ್ರಸ್ಥ ಇನ್ಸಿಟ್ಯೂಟ್ ಆಫ್ ಇನ್ಫರ್‌ಮೇಶನ್ ಟೆಕ್ನಾಲಿಜಿ, ಲಕ್ನೋದ ಕಿಂಗ್ ಜಾರ್ಜ್ಸ್ ಮೆಡಿಕಲ್ ಕಾಲೇಜು ಹಾಗೂ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯಗಳು ಈ ಬಾರಿ ಟೈಮ್ಸ್ ರ್‍ಯಾಂಕಿಂಗ್ ಪಟ್ಟಿಗೆ ಹೊಸದಾಗಿ ಸೇರ್ಪಡೆಯಾದ ಭಾರತದ ವಿವಿಗಳು.

ಟೈಮ್ಸ್‌ನ ವಿವಿಗಳ ರ್‍ಯಾಂಕಿಂಗ್ ಪಟ್ಟಿಗೆ ಭಾರತದ ದಾಖಲೆ ಸಂಸ್ಥೆಗಳ ವಿವಿಗಳು ದಾಖಲಾಗಿರುವುದು ಈ ದೇಶದ ಅಭೂತಪೂರ್ವ ಸಾಧನೆಯೇ ಸರಿ ಎಂದು ಟೈಮ್ಸ್ ಹೈಯರ್ ಎಜುಕೇಷನ್ ಸಂಸ್ಥೆಯ ಫೀಲ್ ಬಟೆ ಪ್ರಶಂಸಿಸಿದ್ದಾರೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:03.08.2020